ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಾದಗಿರಿ

**ಸಿ.ಸಿ. ನಂಃ 928/2022**

ಫಿರ್ಯಾದಿ ಃ ರಾಜ್ಯದ ಪರವಾಗಿ ಗುರುಮಿಠಕಲ್ ಪಿ.ಎಸ್.

// ವಿರುದ್ಧ //

ಆರೋಪಿ ನಂ.**2 :** ಭೀಮುನಾಯಕ ತಂದೆ ರಾಮುನಾಯಕ ರಾಠೋಡ
ವ ಃ **45** ವರ್ಷ ಸಾಃ ಭೋರಾಬಂಡಾ ಗ್ರಾಮ,
ತಾಃ ಗುರುಮಿಠಕಲ್ ಜಿಃ ಯಾದಗಿರಿ

ದಂ.ಪ್ರ.ಸಂ. ಕಲಂ **251** ರಡಿ ಅಪಾದನೆ

ದಿನಾಂಕಃ 22.02.2022 ರಂದು ರಾತ್ರಿ 09.00 ಗಂಟೆ ಸುಮಾರಿಗೆ ಗುರುಮಿಠಕಲ್ ಪೋಲಿಸ್ ಠಾಣಾ ವ್ಯಾಪ್ತಿಯ ನಜರಾಪೂರ-ಮಿನಾಸಪೂರ ರಸ್ತೆ ನಡುವೆ ನಜರಾಪುರ ದಾಟಿದ ನಂತರ ಭೀಮಪ್ಪ ಕೊಂಕಲ ಇವರ ಹೊಲದ ಹತ್ತಿರ 1 ನೇ ಆರೋಪಿತನು ಟ್ರಾಕ್ಟರನ್ನು ಅತಿ ವೇಗ ಮತ್ತು ನಿಷ್ಕಾಳಜಿತನದಿಂದ ನಡೆಸಿ ಒಮ್ಮಿಂದೊಮ್ಮೇಲೆ ಕಟ್ ಹೊಡೆದಿದ್ದರಿಂದ ಅಯ್ಯಪ್ಪನು ಪುಟಿದು ಕೆಳಗೆ ರೋಡಿನ ಮೇಲೆ ಬಿದ್ದು ಬಾರಿ ಗಾಯವಾಗಿ ಸ್ಥಳದಲ್ಲಿ ಮೃತಪಟ್ಟಿರುತ್ತಾನೆ. ಅಪಾಘಾತಪಡಿಸಿದ ಟ್ರಾಕ್ಟರ ಇಂಜಿನ ನಂ.ಕೆಎ-33-ಟಿಎ-8041, ಟ್ರಾಕ್ಟರ ಟ್ರಾಲಿ ನಂಬರ ಕೆಎ-33-ಟಿಎ-7116 ನೇದ್ದರ ಮಾಲೀಕ 2 ನೇ ಆರೋಪಿತನಾದ ನೀವು ಚಾಲನಾ ಪರವಾನಿಗೆ ಇಲ್ಲದೆ ಇದ್ದರೂ 1 ನೇ ಆರೋಪಿತನಿಗೆ ಟ್ಯಾಕ್ಟರ್ ನಡೆಸಲು ಕೊಟ್ಟಿದ್ದು, ಈ ಮೂಲಕ 2 ನೇ ಆರೋಪಿತನಾದ ನೀವು ಕಲಂಃ 180 ಐ.ಎಮ್.ವಿ ಆಕ್ಟ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿದ್ದೀರೆಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಆರೋಪಿತನ ಹೇಳಿಕೆ

ಪ್ರಃ 1. ಆಪಾದನೆ ಓದಿ ಹೇಳಿದ್ದು ತಿಳಿಯಿತಾ ಹೇಗೆ?

ಉತ್ತರಃ

ಪ್ರಃ 2. ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ಪ್ರತಿರಕ್ಷಣೆ ಇದೆಯಾ?

ಉತ್ತರಃ

( ಆಪಾದನೆಯನ್ನು ಈ ದಿನ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಆತನ ಸಹಿ ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ)

ದಿಃ 06.08.2024

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಯಾದಗಿರಿ.